

ಚಿತ್ರ: ಮಂಜುನಾಥ ಹುಲುಕೊಪ್ಪ

# ಮಂಗಣ್ಣನ ಸಾಹಸ

■ ಅರವಿಂದ ಜಿ. ಜೋಷಿ, ಮೈಸೂರು

ಅಂದು ಕಾಡಿನಲ್ಲಿ, ಸಿಂಹದ ನೇತೃತ್ವದಲ್ಲಿ ಎಲ್ಲ ಪ್ರಾಣಿಗಳಿಗಾಗಿ ಮನರಂಜನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಓಟದ ಸ್ಪರ್ಧೆ ಆರಂಭಿಸಿದ ಸಿಂಹ, ಜಿಂಕೆ ಮತ್ತು ಮೊಲ ಎರಡನ್ನೂ ಕೂಗಿ 'ನಿಮ್ಮಲ್ಲಿ ಅತಿ ಕಡಿಮೆ ಸಮಯದಲ್ಲಿ ಯಾರು ವೇಗವಾಗಿ ಓಡುತ್ತಾರೆ ನೋಡೋಣ' ಎಂದಿತು.

ಆಗ ಅವೆರಡೂ ಎದ್ದು ನಿಂತು, ಖುಷಿಯಿಂದ 'ಹೋ... ಎಸ್. ನಾವು ರೆಡಿ' ಎಂದವು.

ಇದೇ ವೇಳೆ ದೂರದ ಪೊದೆಯೊಳಗೆ ಅವಿತು ನಿಂತ ಬೇಟೆಗಾರನೊಬ್ಬ ಸಿಂಹದ ಮಾತು ಆಲಿಸಿದವ 'ತನಗೆ ಒಳ್ಳೆಯ ಅವಕಾಶ ಬಂದೊದಗಿದೆ. ಇದನ್ನು ಬಿಡಬಾರದು' ಅಂದುಕೊಳ್ಳುತ್ತ, ಮೆಲ್ಲಗೆ ಅಲ್ಲಿಂದ ಬಂದು, ಆ ಜಿಂಕೆ ಮತ್ತು ಮೊಲ ಓಡಿಬರಬೇಕಿದ್ದ ದಾರಿಯ, ಮೊದಲನೇಯ ತಿರುವಿನ ಇಳಿಜಾರು ಜಾಗದ ಸುತ್ತ ಸೂಕ್ಷ್ಮವಾದ ಬಲೆ ಕಟ್ಟಿ, ಅವುಗಳ ಬರುವಿಕೆಗಾಗಿ ಕಾದು ಕುಳಿತ.

ಇತ್ತ ಸಿಂಹ, 'ಒನ್, ಟೂ, ಥ್ರೀ..' ಎಂದು ಸೀಟಿ ಊದಿದ್ದೇ ತಡ, ಜಿಂಕೆ ಮತ್ತು ಮೊಲ ಓಡಲಾರಂಭಿಸಿದವು. ಹೀಗೆ ಓಡುತ್ತಿರುವ ರಭಸದಲ್ಲಿ, ಅಕಸ್ಮಾತ್ತಾಗಿ ಜಿಂಕೆ ಒಂದು ಕಲ್ಲಿಗೆ ಎಡವಿ ನೆಲದ ಮೇಲೆ ಬಿದ್ದುಬಿಟ್ಟಿತು. ಅದರೊಂದಿಗೆ ಓಡಿ ಬರುತ್ತಿದ್ದ ಮೊಲ ಗಾಬರಿಗೊಂಡು ಅದರತ್ತ ಧಾವಿಸಿ ಸಮಾಧಾನ ಮಾಡತೊಡಗಿತು.

ಅತ್ತ, ಬಲೆ ಕಟ್ಟಿ ಕಾಯುತ್ತ ಕುಳಿತ ಬೇಟೆಗಾರ 'ಯಾಕಿನ್ನೂ ಈ ಪ್ರಾಣಿಗಳು ಬರಲಿಲ್ಲ' ಎಂದು ಚಡಪಡಿಸತೊಡಗಿದ. ಈ ಕಡೆಗೆ ಸಿಂಹ, 'ಅರೆ, ಇವೆರಡೂ ಹೋಗಿ ತುಂಬಾ ಹೊತ್ತಾಯಿತಲ್ಲ, ಯಾಕಿನ್ನೂ ಬಂದಿಲ್ಲ' ಎಂದು ಯೋಚಿಸಿತು. ಮಂಗಣ್ಣನನ್ನು ಕೂಗಿ ಕರೆದು 'ಅದೇನಾಗಿದೆ